# 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ.114/2024

| ಪಿರ್ಯಾದಿದಾರರು: | ವಿರುದ್ಧ | ಆರೋಪಿತರು |
|---|---|---|
| ಸರ್ಕಾರದ ಪರವಾಗಿ ಮಲೆಬೆನ್ನೂರು ಪೋಲೀಸ್ ಠಾಣೆ | | ಎ.1 ರಾಜಣ್ಣ ಬೆಣ್ಣೆಹಳ್ಳಿ ತಂದೆ ಸಿದ್ಧಲಿಂಗಪ್ಪ, 73 ವರ್ಷ,<br>ಎ.2 ಕೊಗ್ಗಿ ಮಂಜುನಾಥ ತಂದೆ ಪಂಪಣ್ಣ, 35 ವರ್ಷ,<br>ಇಬ್ಬರ ವಾಸ: ಮಲೆಬೆನ್ನೂರು ಪಟ್ಟಣ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. |

### ಆಪಾದನೆ

1 ನೇ ಆರೋಪಿ ಮತ್ತು ಚಾಸಾ.1 ರವರು ಸಹೋದರರಾಗಿದ್ದು, ಆಸ್ತಿ ಪಾಲು ವಿಭಾಗದ ವಿಚಾರವಾಗಿ ಮನಸ್ತಾಪವಿದ್ದು, ದಿನಾಂಕ 04.10.2023 ರಂದು ಮಧ್ಯಾಹ್ನ 02.30 ಗಂಟೆ ಸಮಯದಲ್ಲಿ ಮಲೇಬೆನ್ನೂರು ಪೋಲೀಸ್ ಠಾಣಾ ವ್ಯಾಪ್ತಿಯ ಕೋಮಾರನಹಳ್ಳಿ ಗ್ರಾಮದ ರಿ.ಸ.ನಂ.109/ಸಿ1 ರಲ್ಲಿನ ಅಡಿಕೆ ತೋಟದಲ್ಲಿ ಆರೋಪಿತರು ಅಡಿಕೆಯನ್ನು ಕೊಯ್ಲು ಮಾಡುತ್ತಿರುವಾಗ ಚಾಸಾ.1 ರವರು ಆರೋಪಿತರನ್ನು ಕುರಿತು ''ಏಕೆ ಏಕಪಕ್ಷೀಯವಾಗಿ ಅಡಿಕೆ ಕೊಯ್ಲು ಮಾಡುತ್ತಿದ್ದೀರಿ'' ಎಂದು ಕೇಳಿದ್ದಕ್ಕೆ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1 ನೇ ಆರೋಪಿತನು ಚಾಸಾ.1 ರವರನ್ನ ಮುಂದಕ್ಕೆ ಹೋಗದಂತೆ ತಡೆದು ನಿಲ್ಲಿಸಿ ಅವಾಚ್ಯ ಶಬ್ಧಗಳಿಂದ ಬೈದಾಡಿ, ಕೈಗಳಿಂದ ಚಾಸಾ.1 ರವರ ಮುಖಕ್ಕೆ ಗುದ್ದಿ ಹಲ್ಲೆ ಮಾಡಿ ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, 2 ನೇ ಆರೋಪಿತನು 1 ನೇ ಆರೋಪಿತನಿಗೆ ಚಾಸಾ.1 ರವರ ಮೇಲೆ ಹಲ್ಲೆ ಮಾಡಲು ಕುಮ್ಮಕ್ಕು ನೀಡಿರುತ್ತೀರಿ ಎಂದು ಆಪಾದಿಸಲಾಗಿದೆ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.341, 323, 504, 114 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ: 1. ಮೇಲೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ತಿಳಿಯಿತೇ ?

ಉತ್ತರ: ಎ.1

ಎ.2

ಪ್ರಶ್ನೆಃ 2. ನೀವು ಅಪರಾಧವನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ ಎ.1

ಎ.2

ಈ ಮೇಲೆ ಆರೋಪಿಸಿದ ಆರೋಪಣೆಯ ವಿಚಾರಣೆ ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ ನಡೆಯಬೇಕೆಂದು ಆದೇಶಿಸಿರುತ್ತೇನೆ.

(ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಈ ದಾಖಲೆಯು ಆತನು ನೀಡಿದ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ಅಂಶಗಳನ್ನು ಒಳಗೊಂಡಿದೆ. )

ದಿನಾಂಕಃ

ಸ್ಥಳಃ ಹರಿಹರ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಹರಿಹರ.

# 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ.118/2024

| ಪಿರ್ಯಾದಿದಾರರುಃ | ವಿರುದ್ಧ ಆರೋಪಿತರು |
|---|---|
| ಸರ್ಕಾರದ ಪರವಾಗಿ ಮಲೆಬೆನ್ನೂರು ಪೋಲೀಸ್ ಠಾಣೆ | ಎ.2 ಸತೀಶ ತಂದೆ ಬಸವರಾಜಪ್ಪ, 50 ವರ್ಷ, ವಾಸಃ ಚಿಕ್ಕಜಾಜೂರು ರಸ್ತೆ, ಶಿವಪುರ ಗ್ರಾಮ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |

### ಆಪಾದನೆ

ದಿನಾಂಕ ಃ 02.12.2023 ರಂದು ಮಧ್ಯಾಹ್ನ 02.20 ಗಂಟೆ ಸಮಯದಲ್ಲಿ ಮಲೇಬೆನ್ನೂರು ಪೋಲೀಸ್ ಠಾಣಾ ವ್ಯಾಪ್ತಿಯ ಹಾಲಿವಾಡ ಗ್ರಾಮದ ಸೋಮಶೇಖರಪ್ಪ ರವರ ಜಮೀನಿನ ಪಕ್ಕದಲ್ಲಿರುವ ಮಲೆಬೆನ್ನೂರು ಕುಂದೂರು ರಸ್ತೆಯಲ್ಲಿ 3 ನೇ ಆರೋಪಿತನು 4 ನೇ ಆರೋಪಿತನಾದ ನಿಮ್ಮ ಮಾಲೀಕತ್ವದ ವಿಮೆ ಇಲ್ಲದ ಕೆಎ 17 ಇಜಿ 1504 ನೆ ಹಿರೋಹೊಂಡಾ ಸ್ಲೆಂಡರ್ ಬೈಕನ್ನು ಕುಂದೂರು ಕಡೆಯಿಂದ ರಸ್ತೆಯ ಎಡಬದಿಯಲ್ಲಿ ಬರುತ್ತಿರುವಾಗ 1 ನೇ ಆರೋಪಿತನು 2 ನೇ ಆರೋಪಿತನ ಮಾಲೀಕತ್ವದ ಕೆಎ 16 ಎಎ 0209 ನೇ ಬುಲೇರೋ ಗೂಡ್ಸ್ ವಾಹನದ ಕ್ಯಾಬಿನ್ ನಲ್ಲಿ ನಿಗದಿತ ಮಿತಿಗಿಂತ ಹೆಚ್ಚುವರಿವಾಗಿ ಪ್ರಮಾದ, ಸಂಜಯ್ ಮತ್ತು ನಾಗರಾಜ ರವರನ್ನು ಕೂರಿಸಿಕೊಂಡು ಕುಂದೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು 3 ನೇ ಆರೋಪಿತನ ಬೈಕಿಗೆ ಡಿಕ್ಕಿಪಡಿಸಿ ಅಪಘಾತ ಮಾಡಿ, ಗಾಯಾಳುವಿಗೆ ಉಪಚರಿಸದೆ, ಪೊಲೀಸರಿಗೂ ಮಾಹಿತಿ ನೀಡದೇ ವಾಹನವನ್ನು ಸ್ಥಳದಲ್ಲಿ ಬಿಟ್ಟು ಹೋಗಿದ್ದು, ವಾಹನಗಳು ಜಖಂಗೊಂಡು ಬೈಕ್ ಸಮೇತ ರಸ್ತೆಗೆ ಬಿದ್ದು ತಲೆ, ಮುಖ ಹಾಗೂ ದೇಹದ ಇತರೆ ಭಾಗಗಳಿಗೆ ಪೆಟ್ಟು ಬಿದ್ದು ತೀವ್ರವಾಗಿ ಗಾಯಗೊಂಡಿದ್ದ 3 ನೇ ಆರೋಪಿತನನ್ನು ಚಿಕಿತ್ಸೆಗಾಗಿ ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆದಲ್ಲಿಯೇ ಮೃತಪಟ್ಟಿರುತ್ತಾರೆ. ಅದ್ದರಿಂದ 2 ನೇ ಆರೋಪಿತನಾದ ನೀನು ನಿನ್ನ ಮಾಲೀಕತ್ವದ ಬುಲೇರೋ ಗೂಡ್ಸ್ ವಾಹನದಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚುವರಿ ಪ್ರಯಾಣಿಕರನ್ನು ಕೂರಿಸಲು 1 ನೇ ಆರೋಪಿತನಿಗೆ ಅನುಮತಿ ನೀಡಿದ ಕಾರಣ ಕಲಂ.190(2) ಐಎಂವಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ತಿಳಿಯಿತೇ ?

ಉತ್ತರಃ

ಪ್ರಶ್ನೆಃ 2. ನೀವು ಅಪರಾಧವನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರಃ

ಈ ಮೇಲೆ ಆರೋಪಿಸಿದ ಆರೋಪಣೆಯ ವಿಚಾರಣೆ ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ ನಡೆಯಬೇಕೆಂದು ಆದೇಶಿಸಿರುತ್ತೇನೆ.

(ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಈ ದಾಖಲೆಯು ಆತನು ನೀಡಿದ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ಅಂಶಗಳನ್ನು ಒಳಗೊಂಡಿದೆ. )

Sd/

ದಿನಾಂಕಃ

ಸ್ಥಳಃ ಹರಿಹರ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.